

# ಅಘನಾಶಿನಿಯ ದೃಶ್ಯಕಾವ್ಯ!



■ ಪಾಂಡುರಂಗ ಹೆಗಡೆ

ಪಶ್ಚಿಮ ಘಟ್ಟದ ಗುಡ್ಡಗಾಡಿನಲ್ಲಿ ಶಾಂತವಾಗಿ ಹರಿಯುವ ಅಘನಾಶಿನಿ ಗುಡ್ಡದಿಂದ ಧುಮುಕಿ ಉಂಚಳ್ಳಿ ಜಲಪಾತವನ್ನು ನಿರ್ಮಿಸುತ್ತದೆ. ಹುಣ್ಣಿಮೆಯ ರಾತ್ರಿ ಚಂದ್ರನ ಬಿಲ್ಲನ್ನು ಸೃಷ್ಟಿಸುತ್ತದೆ. ಇಂತಹ ಅಪರೂಪದ, ಪ್ರಕೃತಿಯ ದೃಶ್ಯ ಕಾವ್ಯವನ್ನು ಸವಿಯುವ ಅವಕಾಶವನ್ನು 'ಅಘನಾಶಿನಿ' ಸಾಕ್ಷ್ಯಚಿತ್ರ ಒದಗಿಸಿ ಕೊಡುತ್ತದೆ.

ಅಶ್ವಿನಿ ಕುಮಾರ ಭಟ್, ಸಹನಾ ಬಾಳಕಲ್ಲ **Landscape Wizards** ಎಂಬ ಸಂಸ್ಥೆ ಹುಟ್ಟು ಹಾಕಿ ಮೂರು ವರ್ಷ ಸತತ ಪರಿಶ್ರಮದಿಂದ ಅಪರೂಪದ ಈ ಸಾಕ್ಷ್ಯಚಿತ್ರವನ್ನು ತಟ್ಟಿಸರದ ಸುನಿಲ್, ಹರ್ಷ ಗಂಜಾನಮ್ ಮತ್ತು ತಂಡದ ನೆರವಿನಿಂದ ಹೊರ ತರುವಲ್ಲಿ ಸಫಲರಾಗಿದ್ದಾರೆ.

ಪಶ್ಚಿಮ ಘಟ್ಟಗಳ ಸಾಲು 1600 ಕಿ.ಮೀ ಉದ್ದ ಇದ್ದರೂ, ಅದರ ಉದರದಿಂದ ಹುಟ್ಟುವ ಕಾವೇರಿ, ಕೃಷ್ಣಾ, ಕಬಿನಿ, ಅಥವಾ ಇನ್ನಾವುದೇ ಚಿಕ್ಕ ನದಿಗಳಾಗಲೀ ಸ್ವಚ್ಛಂದದಿಂದ, ಯಾವುದೇ ರೀತಿಯ ಆಣೆಕಟ್ಟಿನ ತಡೆಗಳಿಲ್ಲದೆ ತಮ್ಮ ನೈಸರ್ಗಿಕ ಹರಿವನ್ನು ಉಳಿಸಿಕೊಂಡಿವೆ. ತನ್ನ ಮಡಿಲಲ್ಲಿ ಉದ್ದಿಮೆಗಳ, ಪಟ್ಟಣಗಳ ಮಾಲಿನ್ಯದ ಯಾವ ತೊಂದರೆಯೂ ಇಲ್ಲದೆ ಮುಕ್ತವಾಗಿ ಸ್ವಚ್ಛ ಮತ್ತು ಪರಿಶುದ್ಧವಾಗಿ ಇಂದಿಗೂ ಹರಿಯುತ್ತಿರುವ ನದಿ ಇರುವುದೇ ಸೋಜಿಗದ ಸಂಗತಿ. ಉತ್ತರ ಕನ್ನಡ ಜಿಲ್ಲೆಯ ಸಮೃದ್ಧ ಹಸಿರಿನ ನಡುವೆ ಸ್ವಚ್ಛಂದವಾಗಿ ಹರಿಯುವ ಈ ನದಿಯೇ ಅಘನಾಶಿನಿ.

ಅಘನಾಶಿನಿ ಉಂಚಳ್ಳಿಯಲ್ಲಿ ಗುಡ್ಡದಿಂದ ಕೆಳಗೆ ಪ್ರಪಾತಕ್ಕೆ ಧುಮುಕಿ ರಮಣೀಯವಾದ ಜಲಪಾತವನ್ನು ಸೃಷ್ಟಿಸುತ್ತದೆ. ನಂತರ ಕಡಲ ಸೇರುವ ಮುನ್ನ ಅಪಾರವಾದ ಹರಿವಿನ ಹಿನ್ನೀರಿನ ಘಜನಿ ಭೂಮಿಯನ್ನು ನಿರ್ಮಾಣ ಮಾಡಿ ತದಡಿಯಲ್ಲಿ ಕಡಲನ್ನು ಸೇರುತ್ತದೆ.

ಈ ಸಾಕ್ಷ್ಯಚಿತ್ರದಲ್ಲಿ ಬಾನೆತ್ತರದಿಂದ ಡ್ರೋನ್ ಕ್ಯಾಮರಾದಿಂದ ಸೆರೆ ಹಿಡಿದಿದ್ದರಿಂದ ವಿಹಂಗಮ ನೋಟ ನೋಡುಗರನ್ನು ಸೆಳೆಯುತ್ತದೆ. ಅಘನಾಶಿನಿ ಕಣಿವೆಯ ಜನಜೀವನ, ಕಡಲಿನ ಜೊತೆ ಪ್ರತಿನಿತ್ಯ ಬದುಕಿನ ಹೋರಾಟದಲ್ಲಿ ನಿರತರಾಗಿರುವ ಬಳಚು ಚಿಪ್ಪನ್ನು ಸಂಗ್ರಹಿಸುವ ಮಹಿಳೆಯರ ಸಾಹಸವನ್ನು ಇಲ್ಲಿ ದಾಖಲಿಸಲಾಗಿದೆ. ಸಮುದ್ರದ ಉಪ್ಪು ನೀರು ಹಾಗೂ ನದಿಯ ಸಿಹಿ ನೀರಿನಲ್ಲಿ ನಾಲ್ಕು ಸಾವಿರ ವರ್ಷದ ಇತಿಹಾಸ ಇರುವ ಕಗ್ಗ